ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ

೫೩೭. **ಶ್ರೀ ಗೋಪಾಲ ಮಂಕಂದ ಕಾನಡೆ (ಸಿರಸಿ).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಹಾಲಿ ಎಷ್ಟು ವಿಷಯಗಳನ್ನು ಭೋದಿಸಲಾಗುತ್ತಿದೆ ?

ಆ) ಈ ಎಲ್ಲಾ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಸ್ಥಳಾವಕಾಶ ಹಾಗೂ ಪ್ರಯೋಗಾಲಯಗಳು ಇವೆಯೆ ?

ಇ) ಹಾಗಿಲ್ಲದಿದ್ದಲ್ಲಿ, ಈ ಸಂಸ್ಥೆಯನ್ನು ಮೂರು ಅಥವಾ ನಾಲ್ಕು ಮುಖ್ಯ ವಿಭಾಗಗಳಾಗಿ ಅಂದರೆ ಸಿವಿಲ್, ಎಲೆಕ್ಟ್ರಿಕಲ್, ಮೆಕಾನಿಕಲ್ ಮುಂತಾದ ಭಾಗಗಳಾಗಿ ವಿಂಗಡಿಸಿ ನಗರದ ಇತರೇ ಬಡಾವಣೆಗಳಲ್ಲಿ ತೆರೆಯುವ ಯೋಚನೆ ಸರಕಾರದವರಲ್ಲಿದೆಯೆ ?

ಈ) ಹಾಗಿದ್ದಲ್ಲಿ ಎಷ್ಟು ಸಮಯದಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ೧೬ ಡಿಪ್ಲೊಮೊ ವಿಷಯಗಳನ್ನು ಭೋದಿಸಲಾಗುತ್ತಿದೆ.

ಆ) ಎಲ್ಲಾ ವಿಷಯಗಳಿಗೆ ಬೇಕಾಗುವ ಪ್ರಯೋಗಾಲಯಗಳು ಇವೆ. ಸ್ಥಳಾವಕಾಶ ಸಾಕಾಗುವುದಿಲ್ಲ. ಕಟ್ಟಡ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ.

ಇ) ಸಧ್ಯಕ್ಕೆ ಈ ಪ್ರಸ್ತಾಪನೆ ಇಲ್ಲ.

ಈ) ಪ್ರಶ್ನೆ (ಇ) ಗೆ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉಪನ್ಯಾಸಕರನ್ನು ಹೆಚ್ಚಿನ ವಿದ್ಯಾಭ್ಯಾಸ ಮಾಡಲಂ ಕಳುಹಿಸಿಕೊಡುವುದಂ

೬೧೦. **ಶ್ರೀ ಗೋಪಾಲ ಮಂಕಂದ ಕಾನಡೆ (ಸಿರಸಿ).**—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಡಿಪ್ಲೊಮೊ ಪಡೆದ ಉಪನ್ಯಾಸಕರು ಬಿ.ಇ. ಪದವಿ ಪಡೆಯಲು, ಬಿ.ಇ, ಪದವಿ ಪಡೆದವರು ಎಂಟೆಕ್ ಪಡೆಯಲು, ಅಲ್ಲದೆ ಎಂ.ಇ ಅಥವಾ ಎಂಟೆಕ್ ಪದವಿ ಪಡೆದಿರುವವರು ಪಿ. ಹೆಚ್. ಡಿ. ಪಡೆಯಲು ಆಯಾಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಮನವಿಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಉಪನ್ಯಾಸಕರಿಗೆ ಹೆಚ್ಚಿನ ವಿದ್ಯಾರ್ಜನೆಗಾಗಿ ಅವಕಾಶ ಕಲ್ಪಿಸಲಾಗಿದೆ.

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಈ) ಮದರಾಸು, ಆಂಧ್ರ ಮುಂತಾದ ನೆರೆ ರಾಜ್ಯಗಳಲ್ಲಿ ಈ ರೀತಿ ಉಪನ್ಯಾಸಕರನ್ನು ಹೆಚ್ಚಿನ ಜ್ಞಾನಾರ್ಜನೆಗಾಗಿ ಕಳುಹಿಸುತ್ತಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ, ನಮ್ಮ ರಾಜ್ಯದ ಇಚ್ಛೆಯುಳ್ಳ ಉಪನ್ಯಾಸಕರನ್ನು ಮೇಲ್ಕಂಡ ವಿದ್ಯಾರ್ಜನೆಗೆ ಕಳಿಸಲು ಕೈಗೊಂಡ ಹಾಗು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.